ಹೋಯ್ತಲ್ಲ.' ವಿಚಾರಗಳ ದಾಳಿಗೆ ಅವರ ಕೈಕಾಲು ನಿತ್ರಾಣವಾದಂತಾಗಿ ಹಿಂದೆ ಸರಿದು ಗೋಡೆಗೊರಗಿ ಕೂತುಕೊಂಡರು.

'ನನ್ನ ಈಗಿಂದೀಗಲೇ ಈ ಸುಡುಗಾಡು ಪಾರ್ಟಿಯಿಂದ ಮನೆಗೆ ಕರಕೊಂಡ್ಹೋಗು' ಅಂತ ನಿನ್ನೆ ಹಟ ಹಿಡಿದಾಗ ಮೀರಾ ಕೂಡಲೇ ಕಾರಲ್ಲಿ ತಂದು ಬಿಟ್ಟಿದ್ದಳು. ಆಮೇಲೆ ಅವಳಿಗೇನನ್ನಿಸಿತ್ತೋ, ತಾನೂ ಮನೇಲೇ ಉಳಿದಿದ್ದಳು. ರವಿಗೂ ಫೋನು ಮಾಡಿದ್ದಳೇನೋ, ಅವನೂ ಬಂದಿದ್ದ. ಇಬ್ಬರೂ ಸರಯೂ ಮುಂದೆ ಸುಮ್ಮನೆ ತುಸು ಹೊತ್ತು ಕೂತೆದ್ದು ಹೊರಗೆ ಹೋಗಿದ್ದರು.

ಯೋಚನೆಯಲ್ಲೇ ರಾತ್ರಿ ಕಳೆದಿತ್ತು. ಮುಚ್ಚಿದ ಕಿಟಕಿಯಿಂದ ಬಂದ ಸೂರ್ಯಕಿರಣ ಕೋಣೆಯಲ್ಲಿ ಗೆರೆಯಾಗಿ ಬಿದ್ದಾಗ ಸರಯೂ ಎದ್ದು ಕಿಟಕಿ ತೆರೆದರು. ಇಡೀ ರಾತ್ರಿ ನಿದ್ದೆಗೆಟ್ಟ ಕಣ್ಣುಗಳಿಗೆ ಕೋಮಲ ಬೆಳಕು ಚುಚ್ಚಿತು, ಜೋರಾಗಿ ಬೀಸಿದ ಜನವರಿ ಗಾಳಿಗೆ ಮೈತುಂಬ ಗುಳ್ಳೆಗಳೆದ್ದಾಗ ಏನೋ ನಿರ್ಧರಿಸಿದಂತೆ ಭರಭರನೆ ಬಚ್ಚಲು ಮನೆಗೆ ನಡೆದರು. ನಡುಗುತ್ತಲೇ 'ಗಂಗೇಚ ಯಮುನೇಚೈವ ಗೋದಾವರಿ, ಸರಸ್ವತೀ, ನರ್ಮದೆ, ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು' ಅಂತ ಹೇಳುತ್ತಾ ನಾಲ್ಕಾರು ಚೊಂಬು ತಣ್ಣೀರು ಸುರಿದುಕೊಂಡು ಒದ್ದೆ ಸೀರೆ ಹಿಂಡಿಕೊಂಡು ಬಂದು ದೇವರ ಮನೆಗೆ ಹೋಗಿ ತುಪ್ಪದ ದೀಪ ಹಚ್ಚಿಟ್ಟರು. ಬಳಿಕ ಒದ್ದೆ ಬಟ್ಟೆಯಲ್ಲಿಯೇ ಮಣೆ ಹಾಕಿ ಕೂತುಕೊಂಡು 'ಸಪ್ತ ಮಾತೃಕಾ ಕ್ಷಮಾವಳಿ' ಓದತೊಡಗಿದರು.

ಬಾಗಿಲ ಹಿಂದೆ ನೆರಳು ಕಂಡಂತಾಯ್ತು, ನೋಡಿದರೆ ಮೀರಾ ಮತ್ತು ಸೀತಾ. ಸನ್ನೆಯಿಂದಲೇ ಬರುವಂತೆ ಕರೆದರು.

'ಅತ್ತೆ ಇವಳು ನಿನ್ನೆ ರಾತ್ರಿನೇ ಇಲ್ಲಿ ಬಂದವಳು ಇಲ್ಲೇ ಇದ್ದಾಳೆ, ಊಟ ನಿದ್ದೆ ಏನೂ ಮಾಡದೆ. 'ಅವರಿಗೆ ಪೂರ ಕಿವಿ ಕೇಳಿಸ್ತಿಲ್ಲ ಅಂತ ಗೊತ್ತಿದ್ದ ನಾನೇ ಸ್ವತಃ ಅವರ ಊಟ ತಿಂಡಿಯ ವಾರ್ತೆ ನೋಡಿಕೋಬೇಕಿತ್ತು. ಎಂಥಾ ತಪ್ಪಾಗಿ ಹೋಯ್ತು, ನನ್ನಿಂದಾಗಿ ಅವರ ಸಂಪ್ರದಾಯ ಕೆಟ್ಟಿತು. ಅವರ ಮನಸ್ಸಿಗದೆಷ್ಟು ನೋವು ಕೊಟ್ಟೆ' ಅಂತ ಅಳ್ತಾನೇ ಇದ್ದಾಳೆ' ಅಂತ ಸನ್ನೆಯಿಂದಲೇ ಮೀರ ಹೇಳಿದಳು. ಬಾಡಿದ ಸೀತಾಳ ಮುಖ, ಅಪರಾಧೀ ಭಾವದಲ್ಲಿ ಹಿಡಿಯಷ್ಟಾಗಿ ನಿಂತ ರೀತಿ ಕಂಡು ಮರುಕವುಕ್ಕಿ ಬಂದು 'ಬಾ ಇಲ್ಲಿ' ಅಂತ ಸರಯೂ ಕರೆದರು. ಬಂದು ಪಕ್ಕ ಕುಳಿತವಳ ಬೆನ್ನು, ತಲೆ ಸವರಿದೊಡನೆ ಅವಳು ಮತ್ತೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅವರಿಗೂ ಕಣ್ಣೀರುಕ್ಕಿತು. ಎಷ್ಟೋ ಹೊತ್ತು ಇಬ್ಬರೂ ಹಾಗೆಯೇ ಕುಳಿತಿದ್ದರು. ಆಮೇಲೆ 'ಆಂಟಿ ನಿಮಗೆ ಬೇಜಾರಾಗೋಲ್ಲ ಅಂದರೆ ನಾನೊಂದು ಗಿಫ್ಟ್ ಕೊಡ್ತೇನೆ. ಎಷ್ಟೋ ದಿನದಿಂದ ಬ್ಯಾಗಿನಲ್ಲಿಟ್ಟುಕೊಂಡು ನಿಮ್ಮನೆಗೆ ಬರ್ತಿದ್ದೇನೆ. ಆದರೆ, ಕೊಡಲೇಕೋ ಧೈರ್ಯವೇ ಆಗಿಲ್ಲ' ಅಂದಳು. ಅವಳು ಹಾಳೆಯಲ್ಲಿ ಸುತ್ತಿದ್ದ ಪುಡಿಕೆಯೊಂದನ್ನು ಚೀಲದಿಂದ ತೆಗೆಯುವುದನ್ನು ಕಂಡು ಏನೋ ಕೊಡಬೇಕೆನ್ನುತ್ತಾಳೆ ಅಂತ ತಿಳಿದುಕೊಂಡ ಸರಯೂ 'ಆಗ್ಲಮ್ಮ ಅದೇನು ಕೊಡ್ತೀಯೋ ಕೊಡು' ಅಂತ ನಕ್ಕರು. ಕಾಗದ ಹರಿದರೆ ಒಳಗೆ ಸ್ಫಟಿಕದಂಥಾ ಹಾಲು ಬಿಳಿಯ ಗಾಜಿನ ಪಾಟಿ!

ಮೀರಾ ಕಾಫಿ ತರಲು ಒಳಹೋದಾಗ, ಸೀತಾ, 'ಆಂಟಿ ನಿಮ್ಮ ಹತ್ರ ಯಾವಾಗ್ಲೂ ಈ ಪಾಟಿ, ಪೆನ್ನು ಇಟ್ಕೊಂಬಿಡಿ. ಇದರ ಮೇಲೇನೇ ಕೇಳ್ಬೇಕಾಗಿರೋ ಪ್ರಶ್ನೆಯನ್ನು ಬರೆಯಲು ಎಲ್ಲರಿಗೂ ಹೇಳಿ. ನೀವೂನೂ ಜವಾಬು ಇದರ ಮೇಲೇನೇ ಬರೀರಿ. ಅಂದ್ರೆ ಯಾರೂ 'ಏನೋ ಪ್ರಶ್ನೆಗೆ ಏನೋ ಉತ್ತರ ಕೊಡ್ತಾರೆ' ಅಂತನ್ನೋ ಹಾಗಿಲ್ಲ ಅಲ್ವೆ?' ಅಂತ ಅದರ ಮೇಲೇನೇ ಬರೆದಳು. ಬರೆಯುವುದನ್ನು ತುಸು ನಿಲ್ಲಿಸಿ ಮತ್ತೆ ಮುಂದುವರೆಸಿದಳು. 'ಯಾರಿಗೆ ಗೊತ್ತು? ಬರೀತಾ ಬರೀತಾ ಬರೆದದ್ದನ್ನು ಓದ್ತಾ ಬರೆದವರಿಗೇನೇ ತಮ್ಮ ಪ್ರಶ್ನೆಯ ಕ್ರೌರ್ಯ ತಿಳಿಯಬಹುದು ಅಲ್ವೆ ಆಂಟಿ?'

ಆಮೇಲೆ ಕೈಗೆ ಡಸ್ಟರೊಂದನ್ನಿತ್ತು 'ಆಂಟಿ ಬರೆದಾದ ಮೇಲೆ ಇದರಿಂದ ಎಲ್ಲ ಅಳಿಸಲು ಮರೀಬೇಡಿ ಮತ್ತೆ, ನಿಮ್ಮ ಪಾಟಿ ಮತ್ತೊಂದು ಸಂಭಾಷಣೆಗೆ ಖಾಲಿಯಾಗಬೇಡವೆ?' ಅಂತ ನಕ್ಕಳು. ಅವಳು ಹೇಳಿದ ಕಡೆಯ ಮಾತು ಬರೆಯದೆಯೂ ತಿಳಿದಿತ್ತವರಿಗೆ. ಅವರೂ ನಕ್ಕರು. ಮನಸ್ಸು ಸ್ವಚ್ಛವಾಗಿತ್ತು. ಎಷ್ಟೋ ಹೊತ್ತು ಕೋಣೆಯಿಂದ ತೇಲಿಬರುತ್ತಿದ್ದ ನಗು ರವಿಗೆ ಹೊರಕೋಣೆಯಲ್ಲೂ ಕೇಳುತ್ತಿತ್ತು. ಕಡೆಗೆ ತೇವಗಟ್ಟಿದ ಕನ್ನಡಕ ಸೆರಗಿಂದ ಒರೆಸಿಕೊಂಡರು ಸರಯೂ. ಕ್ಷಮಾವಳಿ ಓದಲು ಕುಳಿತಾಗ ಮುಂದಿದ್ದ ಸಾಲುಗಳು ನಿಚ್ಚಳವಾಗಿ ಕಂಡವು. ●